**57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಲಯ,**
**ಮೆಯೋಹಾಲ್ ಘಟಕ, ಬೆಂಗಳೂರು.**
**(58ನೇ ನಗರ ಸಿವಿಲ್ ನ್ಯಾಯಾಂಗಣ)**

ದಿನಾಂಕಃ 17 ನೇ ಮಾಹೆ ಆಗಸ್ಟ್, 2021.

-ಃ ಉಪಸ್ಥಿತರು ಃ-

ಶ್ರೀಮತಿ ಕೆ. ಜಿ. ಶಾಂತಿ, *ಬಿ.ಕಾಮ್ ಎಲ್ಎಲ್.ಎಂ.,*
57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಮೆಯೋಹಾಲ್ ಘಟಕ, ಬೆಂಗಳೂರು.

**ಅಪರಾಧಿಕ ಸಂಕೀರ್ಣ ಅರ್ಜಿ ಸಂಖ್ಯೆ : 25898/2021**

ಅರ್ಜಿದಾರ/
(5 ನೇ ಆರೋಪಿತ) ಃ **ಕಾರ್ತಿಕ್ ಉರುಫ್ ಕಾಫಿ,**
ಬಿನ್ಃ ಗಣೇಶಪ್ಪ ,
ವಯಸ್ಸುಃ ಸುಮಾರು 25 ವರ್ಷ,
ವಾಸ ನಂ.246, ಜನತಾ ಕಾಲೋನಿ,
ಭಟ್ಟರಹಳ್ಳಿ , ವಿರ್ಗೋನಗರ,
ಬೆಂಗಳೂರು ಉತ್ತರ, ಬೆಂಗಳೂರು.

(ಪರವಾಗಿ ಶ್ರೀ *ಎಂ.ಸುಬ್ರಮಣಿ* - ವಕೀಲರು)

-ವಿರುದ್ಧ-

ಎದುರುದಾರರು ಃ ರಾಜ್ಯದ ಪರವಾಗಿ ಕೆ.ಆರ್.ಪುರಂ
ಪೊಲೀಸ್ ಠಾಣೆ, ಬೆಂಗಳೂರು.

(ಪರವಾಗಿ ಸರ್ಕಾರಿ ಅಭಿಯೋಜಕರು)

************

**ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಸಲ್ಲಿಸಿದ**
**ಅರ್ಜಿಯ ಮೇಲಿನ ಆದೇಶ**

ಈ ಅಪರಾಧಿಕ ಸಂಕೀರ್ಣ ಅರ್ಜಿಯನ್ನು ಅರ್ಜಿದಾರ ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಸಲ್ಲಿಸಿ, ನಿರೀಕ್ಷಣಾ ಜಾಮೀನು ನೀಡಬೇಕೆಂದು ಕೋರಿರುತ್ತಾನೆ.

2. ಇವರು ತನ್ನ ಅರ್ಜಿಯಲ್ಲಿ ಕೆ.ಆರ್.ಪುರಂ ಪೊಲೀಸ್ ಠಾಣೆಯ ಕ್ರೈಮ್ ನಂಬರ್ 215/2021 ಭಾರತೀಯ ದಂಡ ಸಂಹಿತೆ ಕಲಂಃ 399, 402 ರಡಿಯಲ್ಲಿ ದಾಖಲಿಸಿರುವುದಾಗಿ ಹೇಳಿರುತ್ತಾನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರೀಕ್ಷಣಾ ಜಾಮೀನು ನೀಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದಾನೆ.

3. ಈ ಅರ್ಜಿಯ ಸಂಕ್ಷಿಪ್ತ ಸಾರಾಂಶದ ಪ್ರಕಾರ ದಿನಾಂಕ 31.07.2021 ರಂದು ಬೆಳಗಿನ ಜಾವ 4-15 ಗಂಟೆಯ ಸಮಯದಲ್ಲಿ ಕೆ.ಆರ್.ಪುರಂ ಪೊಲೀಸ್ ಠಾಣೆಯ ಸರಹದ್ದಿನ ಐ.ಟಿ.ಸಿ ಬಸ್ ಡಿಪೋ ರಸ್ತೆಯ ಬದಿಯಲ್ಲಿ ಪಿರ್ಯಾದುದಾರರು ಸಿಬ್ಬಂದಿಯೊಂದಿಗೆ ಗಸ್ತಿನಲ್ಲಿದ್ದಾಗ 5 ಜನ ಆಸಾಮಿಗಳು ಮಾರಕಾಸ್ತ್ರಗಳಿಂದ ಸಜ್ಜಾಗಿ ಒಬ್ಬಂಟಿಯಾಗಿ ಓಡಾಡುವ ಹಣವಂತರನ್ನು ತಡೆದು ಆಯುಧಗಳನ್ನು ತೋರಿಸಿ ಹೆದರಿಸಿ ಹಲ್ಲೆಮಾಡಿ ಅವರ ಬಳಿ ಇರುವ ಹಣ, ಒಡವೆ ವಸ್ತುಗಳನ್ನು ದೋಚುವ ಉದ್ದೇಶದಿಂದ ಹೊಂಚುಹಾಕುತ್ತಿರಬೇಕಾದರೆ ಪಿರ್ಯಾದುದಾರರು ಸಿಬ್ಬಂದಿಯೊಂದಿಗೆ ಹಾಗೂ ಪಂಚರ ಸಮಕ್ಷಮ ಆರೋಪಿಗಳ ಮೇಲೆ ದಾಳಿಮಾಡಿದ್ದು 4 ಜನ ಸಿಕ್ಕಿದ್ದು, ಒಬ್ಬ ಆಸಾಮಿ ತಪ್ಪಿಸಿಕೊಂಡು ಓಡಿ ಹೋಗಿರುತ್ತಾನೆ, ಸಿಕ್ಕ ನಾಲ್ಕು ಜನ ಆಸಾಮಿಗಳನ್ನು ಮಾರಕಾಸ್ತ್ರಗಳ ಸಮೇತ ಹಿಡಿದುಕೊಂಡಿದ್ದು ಮುಂದಿನ ಕ್ರಮಕ್ಕಾಗಿ ದೂರು ದಾಖಲಿಸಲಾಗಿದೆ.

4. ಅರ್ಜಿದಾರ ತಾನು ಅಮಾಯಕನಿದ್ದು, ಈ ಪ್ರಕರಣದಲ್ಲಿ ಆರೋಪಿಸಿದಂತಹ ಯಾವುದೇ ಕೃತ್ಯವನ್ನು ಎಸಗಿರುವುದಿಲ್ಲವೆಂದೂ, ತನ್ನನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದೂ, ಬೆಂಗಳೂರಿನ ಖಾಯಂ ನಿವಾಸಿಯಾಗಿರುವ ತಾನು ಗೌರಾವಾನ್ವಿತ ಕುಟುಂಬದವನಾಗಿದ್ದು, ಯಾವುದೇ ಅಪರಾಧಿಕ ಹಿನ್ನೆಲೆ ಹೊಂದಿಲ್ಲವೆಂದು, ಮೇಲ್ನೋಟಕ್ಕೆ ತನ್ನ ವಿರುದ್ಧ ಯಾವುದೇ ಆಪಾದನೆಗಳು ಕಂಡುಬರುತ್ತಿಲ್ಲವೆಂದೂ, ಜೀವಾವಧಿ ಅಥವಾ ಮರಣದಂಡನೆ ವಿಧಿಸುವಂತಹ ಅಪರಾಧಗಳಾಗಿರುವುದಿಲ್ಲವೆಂದೂ, ತನಿಖೆಗೆ ಸಹಕರಿಸಲು ಹಾಗೂ ನ್ಯಾಯಾಲಯ ವಿಧಿಸುವ ಎಲ್ಲಾ ಷರತ್ತುಗಳನ್ನು ಪಾಲಿಸಲು ಮತ್ತು ಸೂಕ್ತ ಜಾಮೀನುದಾರರನ್ನು ನೀಡಲು ಸಿದ್ದನಿದ್ದೇನೆಂದು, ತನಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡದೆ ಇದ್ದಲ್ಲಿ, ತುಂಬಲಾರದ ತೊಂದರೆ

ಉಂಟಾಗುತ್ತದೆ ಎಂದು ಹೇಳಿ, ತನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿದ್ದಾನೆ.

5. ಸರ್ಕಾರಿ ಅಭಿಯೋಜಕರು ಸಲ್ಲಿಸಿರುವ ತಕರಾರಿನಲ್ಲಿ ಈ ಅರ್ಜಿದಾರ ಆರೋಪಿಯು ಉಳಿದ ಆರೋಪಿತರೊಂದಿಗೆ ಸೇರಿಕೊಂಡು ದಾರಿಯಲ್ಲಿ ನಿಂತುಕೊಂಡು ಮಾರಕಾಸ್ತ್ರಗಳನ್ನು ಹಿಡಿದುಕೊಂಡು ದಾರಿಹೋಕರನ್ನು ಅಡ್ಡಗಟ್ಟಿ ಅವರಿಂದ ಹಣ, ಒಡವೆ ವಸ್ತುಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸುತ್ತಿದ್ದಾಗ ಹಿಡಿಯಲು ಹೋದಾಗ ತಪ್ಪಿಸಿಕೊಂಡು ಪರಾರಿಯಾಗಿರುತ್ತಾನೆ, ಅರ್ಜಿದಾರ ರೂಢಿಗತ ಅಪರಾಧಿಯಾಗಿದ್ದು, ಆತನನ್ನು ಈ ಹಂತದಲ್ಲಿ ನಿರೀಕ್ಷಣಾ ಜಾಮೀನು ಮೇಲೆ ಬಿಟ್ಟಲ್ಲಿ ಆತ ಪರಾರಿಯಾಗುವ ಸಾಧ್ಯತೆ ಇದ್ದು, ತನಿಖೆ ಕುಂಠಿತವಾಗುವ ಹಾಗೂ ಅಭಿಯೋಜನಾ ಪರ ಸಾಕ್ಷ್ಯಗಳನ್ನು ನಾಶಪಡಿಸುವ ಸಾಧ್ಯತೆಗಳಿರುವ ಕಾರಣ ತನಿಖಾ ವರದಿಯನ್ನು ಪರಿಗಣಿಸುವಂತೆ ವಿನಂತಿಸಿ, ಆತನ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿಕೊಂಡಿದ್ದಾರೆ.

6. ಕಡತವನ್ನು ಪರಿಶೀಲಿಸಲಾಯಿತು ಹಾಗೂ ಉಭಯತರರ ವಾದವನ್ನು ಆಲಿಸಲಾಯಿತು.

7. ಈ ಹಂತದಲ್ಲಿ ನನ್ನ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೆಃ-

i) ಅರ್ಜಿದಾರ ಈ ಹಂತದಲ್ಲಿ ದಂಡ ಪ್ರಕ್ರಿಯಾ ಸಂಹಿತೆ ಕಲಂಃ438 ರಡಿಯಲ್ಲಿ ನಿರೀಕ್ಷಣಾ ಜಾಮೀನನ್ನು ಪಡೆಯಲು ಅರ್ಹನಿದ್ದಾನೆಯೇ?

ii) ಏನು ಆದೇಶ?

8. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆಃ-

ಅಂಶ i) ಃ ಸಕಾರಾತ್ಮಕವಾಗಿ,

ಅಂಶ ii) ಃ ಅಂತಿಮ ಆದೇಶದಂತೆ, ಈ ಕೆಳಕಂಡಂತೆಃ

## ಕಾ ರ ಣ ಗ ಳು

9. **ಅಂಶ i)** ಃ ಅರ್ಜಿದಾರ ತಾನು ಈ ಪ್ರಕರಣದಲ್ಲಿ ಆರೋಪಿಸಿದಂತಹ ಯಾವುದೇ ಕೃತ್ಯಗಳನ್ನು ಎಸಗಿರುವುದಿಲ್ಲವೆಂದೂ, ತನ್ನನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದೂ, ತನಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡದೆ ಇದ್ದಲ್ಲಿ ತುಂಬಲಾರದ ತೊಂದರೆಯಾಗುತ್ತದೆ ಎಂದು ಹೇಳಿ, ತನ್ನನ್ನು ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

10. ಅಭಿಯೋಜನೆಯ ಪ್ರಕಾರ ಈ ಪ್ರಕರಣದ ಅರ್ಜಿದಾರ ಇತರ ಆರೋಪಿಗಳೊಂದಿಗೆ ಸೇರಿಕೊಂಡು ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಡಕಾಯಿತಿ ಮಾಡಲು ತಯಾರಿ ಮಾಡಿಕೊಂಡು ಕೃತ್ಯವನ್ನು ಮಾಡಲು ಹೊಂಚು ಹಾಕುತ್ತಿದ್ದರು ಎಂಬುದಾಗಿರುತ್ತದೆ. ಆದರೆ ಆರೋಪಿ ಅಪರಾಧಿಕ ಹಿನ್ನೆಲೆವುಳ್ಳವನು ಎನ್ನುವ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ, ಅಭಿಯೋಜನೆಯ ಸಾಕ್ಷ್ಯವನ್ನು ನಾಶಪಡಿಸುವಷ್ಟು ಸಾಮರ್ಥ್ಯವುಳ್ಳವನೆಂದು ಈ ಹಂತದಲ್ಲಿ ಕಂಡುಬರುವುದಿಲ್ಲ. ಅರ್ಜಿದಾರ ಪೊಲೀಸರಿಂದ ಬಂಧನವಾಗುವ ಭೀತಿಯಲ್ಲಿರುತ್ತಾನೆ. ಒಂದು ವೇಳೆ ತನಿಖೆಗೆ ಅವಶ್ಯಕತೆ ಇದ್ದಲ್ಲಿ ತನಿಖೆಗೆ ಸಹಕರಿಸುವಂತೆ ಆದೇಶಿಸಿ ಮತ್ತು ಅಭಿಯೋಜನೆಯು ವ್ಯಕ್ತಪಡಿಸಿದ ಆತಂಕವನ್ನು ನಿವಾರಿಸಲು ಷರತ್ತುಬದ್ಧ ಜಾಮೀನು ನೀಡುವುದು ಸೂಕ್ತ ಎಂದು ಅಭಿಪ್ರಾಯಕ್ಕೆ ಬಂದು ಅಂಶ ಒಂದಕ್ಕೆ **ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

11. **ಅಂಶ ii)**ಃ ಅಂಶ-1 ರಲ್ಲಿ ನೀಡಿರುವ ಕಾರಣಗಳಿಂದ ಈ ಕೆಳಕಂಡ,

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರನಾದ **ಕಾರ್ತಿಕ್ ಉರುಫ್ ಕಾಫಿ,** ಈತನ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಕೆ.ಆರ್.ಪುರಂ ಪೊಲೀಸ್ ಠಾಣೆಯ ಕ್ರೈಮ್ ನಂಬರ್ 215/2021 ಭಾರತೀಯ ದಂಡ ಸಂಹಿತೆ ಕಲಂ : 399, 402 ರಡಿಯಲ್ಲಿ ಅಪರಾಧಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಗಿದೆ.

1. ಅರ್ಜಿದಾರ ಈ ಆದೇಶವಾದ 30 ದಿನಗಳ ಒಳಗೆ ತನಿಖಾಧಿಕಾರಿಯ ಮುಂದೆ ಹಾಜರಾಗಿ ರೂ.50,000 ರೂಪಾಯಿಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೇ ಮೊತ್ತಕ್ಕೆ ಒಬ್ಬ ಜಾಮೀನುದಾರನನ್ನು ತನಿಖಾಧಿಕಾರಿಯ ಮುಂದೆ ಅಥವಾ ಕಾರ್ಯ ವ್ಯಾಪ್ತಿಯಲ್ಲಿರುವ ನ್ಯಾಯಾಲಯಕ್ಕೆ ತೃಪ್ತಿಯಾಗುವಂತೆ ನೀಡತಕ್ಕದ್ದು,

2. ಅರ್ಜಿದಾರ ಹಾಗೂ ಜಾಮೀನುದಾರರು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು.

3. ಅರ್ಜಿದಾರ ತನಿಖಾಧಿಕಾರಿಯು ತನಿಖೆಗೆ ಸಹಕರಿಸುವಂತೆ ಕರೆದಾಗ ಅವರ ಮುಂದೆ ಹಾಜರಾಗತಕ್ಕದ್ದು,

4. ಅರ್ಜಿದಾರ ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾದಾರಗಳನ್ನು ನಾಶಪಡಿಸಬಾರದು,

5. ಅರ್ಜಿದಾರ ತನ್ನ ವಾಸದ ಬಗ್ಗೆ ದೃಢಿಕೃತ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು. ಒಂದು ವೇಳೆ ತನ್ನ

ವಾಸವನ್ನು ಬದಲು ಮಾಡುವ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ವಿಷಯವನ್ನು ತಿಳಿಸತಕ್ಕದ್ದು ಮತ್ತು ತಮ್ಮ ಬದಲಾದ ವಿಳಾಸವನ್ನು ನ್ಯಾಯಾಲಯಕ್ಕೆ/ಸಂಬಂಧಪಟ್ಟ ಠಾಣೆಗೆ ನೀಡಬೇಕು.

(ಈ ಆದೇಶವನ್ನು ತೀರ್ಪುಬರಹಗಾರನಿಗೆ ನೇರವಾಗಿ ಗಣಕ ಯಂತ್ರದ ಮೂಲಕ ಉಕ್ತಲೇಖನ ನೀಡಿ ಅವರು ಬೆರಳಚ್ಚು ಮಾಡಿದ ನಂತರ ತಿದ್ದಿ ದಿನಾಂಕ 17 ನೇ ಮಾಹೇ ಆಗಸ್ಟ್, 2021 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದ್ದೇನೆ)

(ಶ್ರೀಮತಿ ಕೆ. ಜಿ. ಶಾಂತಿ)
57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಮೆಯೋಹಾಲ್ ಘಟಕ, ಬೆಂಗಳೂರು.

ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ (ಪ್ರತ್ಯೇಕ ಆದೇಶದಂತೆ) ಘೋಷಿಸಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 438 ರಡಿಯಲ್ಲಿ ಅರ್ಜಿದಾರನಾದ **ಕಾರ್ತಿಕ್ ಉರುಫ್ ಕಾಫಿ,** ಈತನ ಪರವಾಗಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಕೆ.ಆರ್.ಪುರಂ ಪೊಲೀಸ್ ಠಾಣೆಯ ಕ್ರೈಮ್ ನಂಬರ್ 215/2021 ಭಾರತೀಯ ದಂಡ ಸಂಹಿತೆ ಕಲಂ ಃ 399, 402 ರಡಿಯಲ್ಲಿ ಅಪರಾಧಗಳಿಗೆ ಸಂಬಂಧಿಸಿದಂತೆ, ಈ ಕೆಳಕಂಡ ಷರತ್ತುಗಳನ್ವಯ ಅರ್ಜಿದಾರನಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಲಾಗಿದೆ.

1. ಅರ್ಜಿದಾರ ಈ ಆದೇಶವಾದ 30 ದಿನಗಳ ಒಳಗೆ ತನಿಖಾಧಿಕಾರಿಯ ಮುಂದೆ ಹಾಜರಾಗಿ ರೂ.50,000 ರೂಪಾಯಿಗಳಿಗೆ ವೈಯಕ್ತಿಕ ಜಾಮೀನು ಮುಚ್ಚಳಿಕೆಯನ್ನು ಬರೆದುಕೊಡತಕ್ಕದ್ದು ಹಾಗೂ ಅಷ್ಟೇ ಮೊತ್ತಕ್ಕೆ ಒಬ್ಬ ಜಾಮೀನುದಾರನನ್ನು ತನಿಖಾಧಿಕಾರಿಯ ಮುಂದೆ ಅಥವಾ ಕಾರ್ಯ ವ್ಯಾಪ್ತಿಯಲ್ಲಿರುವ ನ್ಯಾಯಾಲಯಕ್ಕೆತೃಪ್ತಿಯಾಗುವಂತೆ ನೀಡತಕ್ಕದ್ದು,

2. ಅರ್ಜಿದಾರ ಹಾಗೂ ಜಾಮೀನುದಾರರು ತಮ್ಮ ವಾಸದ ವಿಳಾಸದ ಬಗ್ಗೆ ಸೂಕ್ತ ದಾಖಲಾತಿಗಳನ್ನು ನೀಡತಕ್ಕದ್ದು.

3. ಅರ್ಜಿದಾರ ತನಿಖಾಧಿಕಾರಿಯು ತನಿಖೆಗೆ ಸಹಕರಿಸುವಂತೆ ಕರೆದಾಗ ಅವರ ಮುಂದೆ ಹಾಜರಾಗತಕ್ಕದ್ದು,

4. ಅರ್ಜಿದಾರ ಪ್ರತ್ಯಕ್ಷವಾಗಿಯಾಗಲೀ ಅಥವಾ ಪರೋಕ್ಷವಾಗಿಯಾಗಲೀ ಸಾಕ್ಷಿದಾರರನ್ನು ಬೆದರಿಸಬಾರದು ಹಾಗೂ ಸಾಕ್ಷ್ಯಾದಾರಗಳನ್ನು ನಾಶಪಡಿಸಬಾರದು,

5. ಅರ್ಜಿದಾರ ತನ್ನ ವಾಸದ ಬಗ್ಗೆ ದೃಢಿಕೃತ ದಾಖಲೆಗಳನ್ನು ಹಾಜರುಪಡಿಸತಕ್ಕದ್ದು. ಒಂದು ವೇಳೆ ತನ್ನ ವಾಸವನ್ನು ಬದಲು ಮಾಡುವ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ವಿಷಯವನ್ನು ತಿಳಿಸತಕ್ಕದ್ದು ಮತ್ತು ತಮ್ಮ ಬದಲಾದ ವಿಳಾಸವನ್ನು ನ್ಯಾಯಾಲಯಕ್ಕೆ/ ಸಂಬಂಧಪಟ್ಟ ಠಾಣೆಗೆ ನೀಡಬೇಕು.

57ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ಮೆಯೋಹಾಲ್ ಘಟಕ, ಬೆಂಗಳೂರು.